ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ
ನ್ಯಾಯಾಲಯದಲ್ಲಿ, ನ.ರಾ.ಪುರ.
ಸಿಸಿ ನಂ **39/2025**

ಸಿ ಡಬ್ಲ್ಯೂಃ-**9** /ಪಿ ಡಬ್ಲ್ಯೂ ಃ-**6**

ಸಾಕ್ಷಿದಾರರ ಹೆಸರು ಃ ಡಾ. ಪ್ರೀತಮ್ ಕುಮಾರ್ ಎಸ್
ತಂದೆಯ ಹೆಸರು ಃ ವಾಸುದೇವ ಗೌಡ
ವಯಸ್ಸು ಃ **36** ವರ್ಷ
ಉದ್ಯೋಗ ಃ ಪಶು ವೈಧ್ಯಾದಿಕಾರಿ
ವಾಸಸ್ಥಳ ಃ ಎನ್.ಆರ್.ಪುರ

ದಿನಾಂಕಃ **28-04-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಮುಖ್ಯವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ನಾನು ಒಂದು ವರೆ ವರ್ಷದಿಂದ ಪಶು ಆಸ್ಪತ್ರೆ ಎನ್.ಆರ್. ಪುರದಲ್ಲಿ ವೈದ್ಯಾದಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದೇನೆ.

2. ದಿಃ 01.06.2025 ರಂದು ಈ ಪ್ರಕರಣದ ತನಿಖಾಧಿಕಾರಿಯು ಜಾನುವಾರುಗಳನ್ನು ಪರೀಕ್ಷಿಸಿ ಅವುಗಳ ಸ್ಥಿತಿ-ಗತಿಯ ಬಗ್ಗೆ ವರದಿ ನೀಡುವಂತೆ ಮನವಿಯನ್ನು ಸಲ್ಲಿಸಿದ್ದು, ನಾನು ದಿನಾಂಕಃ 03.06.2025 ರಂದು ನಾನು ಬಸ್ತಿಮಠದ ಗೋಶಾಲೆಗೆ ಭೇಟಿ ನೀಡಿ ಅಲ್ಲಿ ಇದ್ದ, 6 ಜಾನುವಾರುಗಳನ್ನು ಪರೀಕ್ಷಿಸಿ ಅವುಗಳಲ್ಲಿ 5 ಹೋರಿ ಕರುಗಳು, 1 ಹೆಣ್ಣು ಹಸು ಇದ್ದು ಅದು 7 ವರ್ಷ ಇದ್ದು, ಅದು ಬೂದು ಬಣ್ಣ ಹೊಂದಿದ್ದು, ಅಂದಾಜು ಮೌಲ್ಯ 20 ರಿಂದ 25 ಸಾವಿರ, ಆರೋಗ್ಯವಾಗಿರುತ್ತದೆ. 2) ಹೋರಿ ಕರುಗಳ ಪೈಕಿ 5 ತಿಂಗಳು, ಗಂಡು ಬೂದು ಬಣ್ಣ, 20 ರಿಂದ 25 ಸಾವಿರ, ಆರೋಗ್ಯವಾಗಿರುತ್ತದೆ. 3) ಹೋರಿ 5 ವರ್ಷದ್ದು, ಗಂಡು, ಕಪ್ಪು ಬಣ್ಣ, ಅಂದಾಜು ಮೌಲ್ಯ 20 ರಿಂದ 25 ಸಾವಿರ, ಆರೋಗ್ಯವಾಗಿರುತ್ತದೆ. 4) ಹೋರಿ ಕರು, 8 ತಿಂಗಳು, ಗಂಡು, ಬೂದು ಬಣ್ಣ ಅಂದಾಜು ಮೌಲ್ಯ 5 ರಿಂದ 8 ಸಾವಿರ, ಆರೋಗ್ಯವಾಗಿರುತ್ತದೆ. 5) ಹೋರಿ 5 ವರ್ಷ, ಗಂಡು, ಕಪ್ಪು ಬಣ್ಣ, ಅಂದಾಜು ಮೌಲ್ಯ 20 ರಿಂದ 25 ಸಾವಿರ, ಆರೋಗ್ಯವಾಗಿರುತ್ತದೆ. 6) ಹೋರಿ ಕರು, 6 ತಿಂಗಳು, ಗಂಡು, ಬೂದು ಬಣ್ಣ, ಅಂದಾಜು ಮೌಲ್ಯ 5 ರಿಂದ 8 ಸಾವಿರ ಆರೋಗ್ಯವಾಗಿರುತ್ತದೆ ಎಂದು ಪರೀಕ್ಷಿಸಿ ನಾನು ದಿನಾಂಕಃ 11.06.2025 ರಂದು ತನಿಖಾಧಿಕಾರಿಗೆ ವರದಿಯನ್ನು ನೀಡಿರುತ್ತೇನೆ. ಸದರಿ ಜಾನುವಾರುಗಳ ಪೈಕಿ 5 ವರ್ಷದ ಹೋರಿ ಕಪ್ಪು ಬಣ್ಣದ ಜಾನುವಾರದ ಮುಂದಿನ ಬಲಗಾಲು ಮುರಿದಿರುತ್ತದೆ.

3. ಸಾಕ್ಷಿಯು ದಿನಾಂಕಃ 01.06.2025 ರಂದು ತಾವು ಸ್ವೀಕರಿಸಿದ ಅರ್ಜಿಯ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು. ಸಾಕ್ಷಿಯು ದಿನಾಂಕಃ 11.06.2025 ರಂದು ತಾವು ತನಿಖಾಧಿಕಾರಿಗೆ ನೀಡಿದ ಪರೀಕ್ಷಾ ವರದಿಯನ್ನು ನೋಡಿ ಗುರುತಿಸಿದ್ದು, ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11 ಏ ಎಂದು ಗುರುತಿಸಲಾಯಿತು.

ಃ ಪಾಟೀ ಸವಾಲು ಆರೋಪಿ 1 ಮತ್ತು 2 ರ ಪರ ಶ್ರೀ HAS ವಕೀಲರಿಂದ ಃ

1. ನಾನು MVS ವ್ಯಾಸಂಗ ಮಾಡಿರುತ್ತೇನೆ. ನನಗೆ ಪೋಲಿಸರು ಜಾನುವಾರು ಪರೀಕ್ಷೆ ಮಾಡುವಂತೆ ಅರ್ಜಿಯನ್ನು ಖುದ್ದಾಗಿ ತಂದು ಕೊಟ್ಟಿರುತ್ತಾರೆ. ಈ ರೀತಿ ಅರ್ಜಿ ಕೊಟ್ಟಿರುವ ವಿಚಾರ ನನಗೆ ದಿನಾಂಕಃ 03.06.2025 ರಂದು ಗೊತ್ತಾಗಿರುತ್ತದೆ. ನಾನು ಜಾನುವಾರು ಪರೀಕ್ಷೆ ಮಾಡಲು ನನ್ನ ವಾಹನದಲ್ಲಿ ಬಸ್ತಿಮಠದ ಗೋಶಾಲೆಗೆ ಹೋಗಿರುತ್ತೇನೆ. ನಿಶಾನೆ ಪಿ 10 ರಲ್ಲಿ ಬಸ್ತಿಮಠದ ಗೋಶಾಲೆಯಲ್ಲಿ ಜಾನುವಾರುಗಳು ಇರುತ್ತವೆ, ಅವುಗಳನ್ನು ಪರೀಕ್ಷಿಸಿ ವರದಿ ನೀಡುವಂತೆ ನಮೂದು ಇರುವುದಿಲ್ಲ ಎಂದರೆ ಸರಿ. ನಾನು ಸದರಿ ಜಾನುವಾರುಗಳನ್ನು ಪರೀಕ್ಷೆ ಮಾಡುವ ಕಾಲಕ್ಕೆ ಸದರಿ ಜಾನುವಾರುಗಳ ಭಾವಚಿತ್ರಗಳನ್ನು ನನಗೆ ಕೊಟ್ಟಿರುವುದಿಲ್ಲ. ನಾನು ಪರೀಕ್ಷೆಗೆ ಹೋದ ಕಾಲಕ್ಕೆ ಈ ಪ್ರಕರಣದ ಜಾನುವಾರುಗಳನ್ನು ಹೊರತುಪಡಿಸಿ ಬೇರೆ ಯಾವುದೇ ಜಾನುವಾರುಗಳು ಇರಲಿಲ್ಲ. ಆ ದಿನ ಸದರಿ ಜಾನುವಾರುಗಳನ್ನು ಪರೀಕ್ಷಿಸುವ ಸಲುವಾಗಿ ನಾನು ಮತ್ತು ಗುತ್ತಿಗೆ ಆಧಾರದ ಮೇಲಿನ ವೈದ್ಯಾಧಿಕಾರಿಯಾದ ರೇಣುಕಾ ಪ್ರಸಾದ ಬಸ್ತಿಮಠಕ್ಕೆ ಹೋಗಿರುತ್ತೇವೆ.

2. ದಿನಾಂಕಃ 03.06.2025 ರಂದು ನಾವು 11.00 ಗಂಟೆಗೆ ಹೋಗಿದ್ದು ಅರ್ಧ ಗಂಟೆ ಅವಧಿಯಲ್ಲಿ ಸದರಿ ಜಾನುವಾರುಗಳನ್ನು ಪರೀಕ್ಷೆ ಮಾಡಿರುತ್ತೇವೆ. ನಿಪಿ -11 ಅನ್ನು ತಯಾರು ಮಾಡಲು ನಾವೇ ಮಾಹಿತಿಯನ್ನು ನಮ್ಮ ಆಸ್ಪತ್ರೆಯ ಬೆರಳಚ್ಚುಗಾರರಿಗೆ ನೀಡಿರುತ್ತೇನೆ. ಸದರಿ ನಿಪಿ-11 ಕ್ಕೆ ನಾನು ಮತ್ತು ರೇಣುಕಾ ಪ್ರಸಾದ ವೈದ್ಯಾಧಿಕಾರಿಗಳು ಸಹಿ ಮಾಡಿರುತ್ತೇವೆ. ದಿನಾಂಕಃ 01.06.2025 ರಂದು ನಾವು ಜಾನುವಾರುಗಳನ್ನು ಪರೀಕ್ಷೆ ಮಾಡಿರುವುದಿಲ್ಲ ಎಂದರೆ ಸರಿ. 5 ವರ್ಷದ ಕಪ್ಪು ಬಣ್ಣದ ಹೋರಿ ಮುಂದಿನ ಬಲಗಾಲು ಮುರಿದಿದ್ದು, ನಾನು ಜಾನುವಾರು ಪರೀಕ್ಷಗೆ ಹೋಗುವ ಪೂರ್ವದಲ್ಲಿ ಅದಕ್ಕೆ ಚಿಕಿತ್ಸೆಯನ್ನು ನೀಡಲಾಗಿರುತ್ತದೆ. ನಂತರ ನಾನು ಜಾನುವಾರು ಪರೀಕ್ಷೆ ಮಾಡಿದ ನಂತರ ಸದರಿ ಜಾನುವಾರಕ್ಕೆ ಚಿಕಿತ್ಸೆ ನೀಡಿರುತ್ತೇನೆ. ನಾನು ಸದರಿ ಜಾನುವಾರಕ್ಕೆ ಗಾಯದ ಪ್ರಮಾಣಪತ್ರವನ್ನು ನೀಡಿರುವುದಿಲ್ಲ. ನಾನು ದಿನಾಂಕಃ 03.06.2025 ರಂದು ಬಸ್ತಿಮಠಕ್ಕೆ ಹೋಗಿ ಜಾನುವಾರುಗಳನ್ನು ಪರೀಕ್ಷೆ ಮಾಡಿರುವುದಿಲ್ಲ, ಪೋಲಿಸರು ತಯಾರಿಸಿದ ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿ 3 ರ ಪರ ವಕೀಲರು ಆರೋಪಿ 1 ಮತ್ತು 2 ರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಓ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ